# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ-29.05.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಸಿದ್ದಲಿಂಗಯ್ಯ ಬಿನ್ ಬಸವಯ್ಯ<br>54 ವರ್ಷ<br>ವ್ಯವಸಾಯ<br>ಅಲ್ಲೇನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

ಪಾಟೀ ಸವಾಲುಃ- ಪ್ರತಿ ವಾದಿಗಳ ಪರ ವಕೀಲರಾದ ಶ್ರೀ. ಸಿ .ಎಸ್,ಎ.ರವರಿಂದ

ನನ್ನ ವಾದಪತ್ರದಲ್ಲಿ ಬರೆಸಿರುವ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ , ಅದನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ವಾದಪತ್ರದಲ್ಲಿ ಹಲ್ಲೇನಹಳ್ಳಿ ಗ್ರಾಮದ ನಿವೇಶನ ಸ್ವತ್ತು ಖಾತಾ ನಂಃ 33/ಎ ಪೂರ್ವ – ಪಶ್ಚಿಮ – 102 ಅಡಿ , ಉತ್ತರ – ದಕ್ಷಿಣ – 56 ಅಡಿ ಮೂಲತಃ ಬಸವೇಗೌಡ ಎನ್ನುವವರಿಗೆ ಸೇರಿತ್ತು ಎಂದು ಬರೆಸಿದ್ದೇನೆ ಎಂದರೆ ಸರಿ. ಯಾವ ದಾಖಲೆಯ ಆಧಾರದಮೇಲೆ ನೀವು ಆ ರೀತಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಖಾತೆ ನನ್ನ ತಂದೆ ಬಸವೇಗೌಡನ ಹೆಸರಿನಲ್ಲಿತ್ತು ಅದಕ್ಕೆ ಆ ರೀತಿ ಬರೆಸಿದ್ದೇನೆ. ಈಗಲೂ ಸಹ ನನ್ನ ಬಳಿ ಮೇಲೆ ಹೇಳಿದ ಆಸ್ತಿಗೆ ಸಂಬಂದಪಟ್ಟಂತೆ ಖಾತೆ ಇರುತ್ತದೆ. ಮೇಲೆ ಹೇಳಿದ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

2. ನನಗೆ 4 ಜನ ಅಕ್ಕತಂಗಿಯರು ಹಾಗೂ ಒಬ್ಬ ಸಹೋದರ ಇದ್ದಾನೆ. ನನ್ನ ತಂದೆ ಬಸವೇಗೌಡ ಮೃತಪಟ್ಟ ನಂತರ ಮೇಲೆ ಹೇಳಿದ ನಿವೇಶನ ಸ್ವತ್ತು ಶಿವಲಿಂಗಪ್ಪನಿಗೆ ಪವತಿವಾರಸು ಮೇಲೆ ಬಂದಿರಬಹುದು ನಾನು ದಾಖಲೆಗಳನ್ನು ನೋಡಿಲ್ಲ. 2012 ರಲ್ಲಿ ಶಿವಲಿಂಗಪ್ಪನ ಮಕ್ಕಳು ಪಂಚಾಯಿತಿ ಪಾರಿಕತ್ ಮುಖಾಂತರ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಪಂಚಾಯಿತಿ ಪಾರಿಕತ್ ಅನ್ನು ನಾನು ಗುಬ್ಬಿ ಯುಿನಿಯನ್ ಬ್ಯಾಂಕ್ ನಲ್ಲಿ ಸಾಲದ ಬಾಬ್ತು ಅಡಮಾನ ಮಾಡಿರುತ್ತೇನೆ. ಸಾಕ್ಷಿ ಮುಂದುವರಿದು 2019 ರಲ್ಲಿ ಆ ಪಂಚಾಯಿತಿ ಪಾರಿಕತ್ ಅನ್ನು ರಿಜಿಸ್ಟರ್ ಮಾಡಿಸಿರುತ್ತೇನೆ , ಆಮೇಲೆ ಬ್ಯಾಂಕ್ ಗೆ ನೀಡಿರುತ್ತೇನೆ. ಖಾತಾ ನಂಬರ್ 33/ಎ ನಿವೇಶನದ ವಿಸ್ತೀರ್ಣ ಪೂರ್ವ – ಪಶ್ಚಿಮ -102 ಅಡಿ, ಉತ್ತರ - ದಕ್ಷಿಣ – 56 ಅಡಿ ಎಂದಿಗೂ ಇರಲಿಲ್ಲ ಎಂದರೆ ಸಾಕ್ಷಿಯು ಪಂಚಾಯಿತಿಯವರು ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ.

3. ಪ್ರತಿವಾದಿಗೆ ಹಲ್ಲೇನಹಳ್ಳಿಯ ಸ.ನಂಃ 14/5 ರಲ್ಲಿ ಜಮೀನು ಇದೆ ಎಂದರೆ ಸರಿ . ಆ ಜಮೀನಿನಲ್ಲಿ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಅವರ ಮನೆಗೆ ಉತ್ತರ ದಿಕ್ಕಿನಲ್ಲಿರುವ ರಸ್ತೆಯಿಂದ ಓಡಾಡಬೇಕು ಎಂದರೆ ಸಾಕ್ಷಿಯು ಅಲ್ಲಿ ರಸ್ತೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ- ಹೆಚ್.ಎಸ್.ಪಿ. ಈಶ್ವರ್ ರವರ ಜಮೀನು ಇರುತ್ತದೆ ಎನ್ನುತ್ತಾರೆ. ಪಶ್ಚಿಮಕ್ಕೆ- ದೇವನಹಳ್ಳಿಯ ರಾಜಣ್ಣ, ಬಸವಣ್ಣ ರವರ ಜಮೀನು ಇರುತ್ತದೆ. ದಕ್ಷಿಣಕ್ಕೆ- ನೀಲೇಗೌಡರ ಜಮೀನು ಇರುತ್ತದೆ.

4. ದಾವಾಸ್ವತ್ತಿನ ದಕ್ಷಿಣಕ್ಕೆ ಪ್ರತಿವಾದಿ ಜಮೀನು ಇದೆ ಎಂದು ನಾನು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.8 ರಲ್ಲಿ ಊರು ಎಂದು ತೋರಿಸಿರುವ ಜಾಗ ಹಲ್ಲೇನಹಳ್ಳಿ ಗ್ರಾಮ ಎಂದರೆ ಸರಿ. ನಿ.ಪಿ.8 ರಲ್ಲಿರುವ ಸದರಿ ಭಾಗವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಿ.ಪಿ.8 ರಲ್ಲಿ ಕಲ್ಲೂರಿನಿಂದ ಬ್ಯಾಡರಮಲ್ಲೇನ ಹಳ್ಳಿಗೆ ಹೋಗಲು ದಾರಿ ಇದೆ ಎಂದರೆ ಸರಿ. ನಿ.ಪಿ.8 ರಲ್ಲಿ ಇರುವಂತೆ ಹಲ್ಲೇನಹಳ್ಳಿ ಯಿಂದ ಜೀಗನಹಳ್ಳಿಗೆ ಒಂದು ರಸ್ತೆ ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಯ ಉತ್ತರಕ್ಕೆ ಹಲ್ಲೇನಹಳ್ಳಿಯ ಗ್ರಾಮಠಾಣಾ ಇದೆ ಎಂದರೆ ಸರಿ. ಸದರಿ ರಸ್ತೆಯ ದಕ್ಷಿಣಕ್ಕೆ ಸ.ನಂಃ11 , 18 , 17 ,14 ಇಡುವಳಿ ಜಮೀನುಗಳು ಬರುತ್ತವೆ ಎಂದರೆ ಸರಿ. ದಾವಾಸ್ವತ್ತು ಹಲ್ಲೇನಹಳ್ಳಿ ಗ್ರಾಮಠಾಣಾದಲ್ಲಿರುವ ಸ್ವತ್ತು ಎಂದರೆ ಸರಿ . ಹಲ್ಲೇನಹಳ್ಳಿ - ಜೀಗನಹಳ್ಳಿ ರಸ್ತೆಯ ಉತ್ತರಕ್ಕೆ ನನಗೆ ಸೇರಿದ ಸ್ವತ್ತು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ದಕ್ಷಿಣಕ್ಕೆ ಬರುತ್ತದೆ ಎನ್ನುತ್ತಾರೆ. ನನ್ನ ಪೂರ್ವಜರಿಗೆ ಖಾತಾ ನಂಃ 33/ಎ ಪೂರ್ವ – ಪಶ್ಚಿಮ – 102 ಅಡಿ , ಉತ್ತರ – ದಕ್ಷಿಣ – 56 ಅಡಿ ಜಾಗ ಇರಲಿಲ್ಲ ನಾನು ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ಸದರಿ ವಿಸ್ತೀರ್ಣವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

5. 2020 ರಲ್ಲಿ ನಮ್ಮ ಗ್ರಾಮದವರೆಲ್ಲಾ ಹಾಗೂ ಪ್ರತಿವಾದಿ ಸೇರಿ ನಾನು ರಸ್ತೆಯಲ್ಲಿ ಕಾಯಿ ಶೆಡ್ ಅನ್ನು ನಿರ್ಮಾಣ ಮಾಡುತ್ತಿದ್ದೇನೆ ಎಂದು ಹೇಳಿ ನನ್ನ ವಿರುದ್ಧ ಗ್ರಾಮಪಂಚಾಯಿತಿಯವರಿಗೆ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಗ್ರಾಮಸ್ಥರೆಲ್ಲಾ ಸೇರಿ ನಾನು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ಕಾರಿ ರಸ್ತೆಯಲ್ಲಿ ಸುಮಾರು 224 ಚದುರ ಮೀಟರ್ ಅನ್ನು ಒತ್ತುವರಿ ಮಾಡಿಕೊಂಡು ಕಾಯಿ ಶೆಡ್ ಅನ್ನು ನಿರ್ಮಾಣ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನನ್ನ ಮೇಲೆ ದೂರು ನೀಡಿದ್ದಕ್ಕೆ ನಾನು ಬ್ಯಾಡಗೆರೆ ಗ್ರಾಮಪಂಚಾಯಿತಿಯಲ್ಲಿ ಇನ್ ಫ್ಲುಯನ್ಸ್ ಮಾಡಿ ಸದರಿ ದೂರು ಸ್ವಹಿತಾಸಕ್ತಿಯದ್ದು ಸಾರ್ವಜನಿಕ ಹಿತಾಸಕ್ತಿ ಹೊಂದಿಲ್ಲ ಎಂದು ಹಿಂಬರಹ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಿ.ಪಿ.7 ಖಾನೇಶುಮಾರಿ ವಹಿ ಎಂದರೆ ಸರಿ . ಸದರಿ ನಿ.ಪಿ.7 ರಲ್ಲಿ ಖಾತೆ ನಂಬರ್.40 ಮತ್ತು 41 ರಲ್ಲಿ ಪುಟ್ಟಮ್ಮ ಕೋಂ ಬೋರೇಗೌಡನ ಪಾಳು ಎಂದು ನಮೂದಾಗಿದೆ ಎಂದರೆ ಸರಿ . ಸದರಿ ನಿ.ಪಿ.7 ದಾವಾಸ್ವತ್ತಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿ. ಸದರಿ ಪುಟ್ಟಮ್ಮ ಯಾರು ಎಂದು ನೀವು ನಿಮ್ಮ ವಾದಪತ್ರದಲ್ಲಾಗಲೀ , ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ವಂಶವೃಕ್ಷ ಕೊಟ್ಟಿದ್ದೇನೆ ಎನ್ನುತ್ತಾರೆ. ನಿ.ಪಿ.7 ರಲ್ಲಿ ಖಾತೆ ನಂಬರ್ 40 ಮತ್ತು 41 ರ ಬಾಬ್ತು ವಿಸ್ತೀರ್ಣ ಬರೆದಿಲ್ಲ ಎಂದರೆ ಸರಿ. ಖಾತಾ ನಂಃ 33/ಎ ಪೂರ್ವ ಪಶ್ಚಿಮ – 102 ಅಡಿ , ಉತ್ತರ – ದಕ್ಷಿಣ – 56 ಅಡಿ ಗೆ ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

7. ಪ್ರತಿವಾದಿಗೆ ಸೇರಿದ ಸ.ನಂಃ14/5 ಜಮೀನಿಗೆ ನನಗೆ ಯಾವುದೇ ರೀತಿ ಹಕ್ಕು , ಸ್ವಾಧೀನ ಇಲ್ಲ ಎಂದರೆ ಸರಿ . ದಾವಾಸ್ವತ್ತು ಹಾಗೂ ಪ್ರತಿವಾದಿಗೆ ಸೇರಿದ ಮೇಲೆ ಹೇಳಿದ ಜಮೀನಿನ ಮಧ್ಯೆ ಒಂದು ಸರ್ಕಾರಿ ರಸ್ತೆ ಇದ್ದು ಆ ವಿಚಾರವಾಗಿ ನಮಗೆ ವ್ಯಾಜ್ಯ ಇದೆ ಎಂದರೆ ಸರಿಯಲ್ಲ. ನಾನು ಆ ರೀತಿ ಸರ್ಕಾರಿ ರಸ್ತೆಯನ್ನು ಕಬಳಿಸುತ್ತಿದ್ದೇನೆ ಎಂದು ಹೇಳಿ ಪ್ರತಿವಾದಿ ನನ್ನ ವಿರುದ್ದ ವಿಶೇಷ ನ್ಯಾಯಾಲಯ ಕರ್ನಾಟಕ ಭೂಕಬಳಿಕೆ ನಿಷೇದ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದೂರು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನ್ಯಾಯಾಲಯದಿಂದ ನನಗೆ ನೋಟೀಸ್ ಸಹ ಬಂದಿತ್ತು ಎಂದರೆ ಸರಿಯಲ್ಲ. ಸದರಿ ನ್ಯಾಯಾಲಯವು ಮೇಲೆ ಹೇಳಿದ ಭೂ ಕಬಳಿಕೆ ನಿಷೇದ ಕಾಯ್ದೆ-2011 ಗ್ರಾಮವ್ಯಾಪ್ತಿಯಲ್ಲಿರುವ ಸ್ವತ್ತುಗಳಿಗೆ ಅನ್ವಯಿಸುವುದಿಲ್ಲ ಎಂದು ಹೇಳಿ ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ಕಾರಿ ರಸ್ತೆಯಲ್ಲಿ ಕಟ್ಟಿರುವ ಕಾಯಿ ಶೆಡ್ ಅನ್ನು ಉಳಿಸಿಕೊಳ್ಳುವ ಸಲುವಾಗಿ ಪ್ರತಿವಾದಿ ವಿರುದ್ದ ಈ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನನಗೆ ಯಾವುದೇ ಮಾಲೀಕತ್ವ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.1 ರಿಂದ ನಿಪಿ.11 ಈ ದಾವೆಗೆಂದು ಸೃಷ್ಟಿ ಮಾಡಿ ಹಾಕಿದ್ದೇನೆ ಎಂದರೆ ಸರಿಯಲ್ಲ.
ಮರುವಿಚಾರಣೆ ಇಲ್ಲ.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

O.S.249/2020

Both counsels and parties present.
L/C for defendant cross examined Pw1 fully.
Plaintiff counsel prays time for further plaintiff evidence. Call on. 23.07.2024.

PCJ and JMFC, Gubbi.